# ಗಡ್ಡಕ್ಕೂ ಹೂವು!







ಹೂವು ಯಾರಿಗೆ ಬೇಡ? ಅದರಲ್ಲೂ ಮಹಿಳೆಯರಿಗೆ ಹೂವು ಎಂದರೆ ಪಂಚಪ್ರಾಣ. ಮಾಲೆ ಕಟ್ಟಿ ತಲೆಗೆ ಏರಿಸಿಕೊಳ್ಳುವ ಅವರ ಸಂಭ್ರಮ–ಸಡಗರವನ್ನು ನೋಡಬೇಕು! ಗಂಡಸರಿಗೆ ಹೂವಿನ ಮೇಲೆ ಮೋಹ ಇಲ್ಲ ಎನ್ನಲಾಗುತ್ತಿತ್ತು. ಈಗ ಆ ಮಾತನ್ನು ಅಮೆರಿಕದ ಕೆಲವು ಪುರುಷರು ಸುಳ್ಳು ಮಾಡುತ್ತಿದ್ದಾರೆ.

ಅಲ್ಲಿನ ಪುರುಷರು ತಮ್ಮ ಗಡ್ಡ–ಮೀಸೆಗಳಿಗೆ ಹೂವು ಮುಡಿದುಕೊಳ್ಳುವ ಫ್ಯಾಷನ್ ಶುರು ಮಾಡಿದ್ದಾರೆ. ನ್ಯೂಯಾರ್ಕ್‌ನ ಬ್ರುಕ್ಲಿನ್, ಪೋರ್ಟ್‌ಲ್ಯಾಂಡ್ ಹಾಗೂ ಸ್ಯಾನ್‌ಫ್ರಾನ್ಸಿಸ್ಕೊ ನಗರಗಳಲ್ಲಿ ಈ ಫ್ಯಾಷನ್ ಜೋರಾಗಿದೆ. ಸಾಂಪ್ರದಾಯಿಕ ಮಾರ್ಗವನ್ನು ಬಿಟ್ಟು ಹೊಸ ಸಂಸ್ಕೃತಿಯನ್ನು ಹುಟ್ಟು ಹಾಕುವವರನ್ನು ಇಲ್ಲಿ ಹಿಪ್‌ಸ್ಟಾರ್ ಎಂದು ಕರೆಯುತ್ತಾರೆ.

‘ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೇಕೆ ಮಲ್ಲಿಗೆ’ ಎಂದು ಮಹಿಳೆಯರನ್ನೇ ಟೀಕಿಸಿದವರು ಭಾರತೀಯರು. ಹಿಟ್ಟು ಹೆಚ್ಚಾದವರು, ಗಡ್ಡಕ್ಕೇಕೆ ಮಲ್ಲಿಗೆ ಬೇಡ ಎಂದು ಪ್ರತಿಸವಾಲು ಹಾಕಿದರೂ ಹಾಕಬಹುದು!

■ ಸುಭಾಸ ಯಾದವಾಡ





